**ದಿನಾಂಕ: 02-02-2019 ರಂದು ನಡೆದ ವಾರ್ಡ್ 174 ಸಮಿತಿಯ ಅಧ್ಯಕ್ಷರಾದ ಶ್ರೀ ಗುರುಮೂರ್ತಿ ರೆಡ್ಡಿ ರವರು ಪಾಲಿಕೆ ಸದಸ್ಯರ ಛಟ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.**

ವಾಡ್ ಸಮಿತಿಯ ಅಧ್ಯಕ್ಷರು, ಸದ್ಯಸರು, ಕಾರ್ಯದರ್ಶಿ ಮತ್ತು ಅಧಿಕಾರಿ/ನೌಕರರ ವರ್ಗದವರಿಗೆ ಸ್ವಾಗತ ಕೋರಲಾಗಿ, ವಾರ್ಡ್ ಸಮಿತಿಯ ಸದ್ಯಸರುಗಳಿಗೆ ಗುರುತಿನ ಚೀಟಿಯನ್ನು ನೀಡಿ ಕಳೆದ ತಿಂಗಳ ದೂರುಗಳ ಬಗ್ಗೆ ವಿಚಾರ ಮಾಡಿ, ಅದರ ಆಗುಹೋಗುಗಳ ಬಗ್ಗೆ ತಿಳಿಸಲಾಯಿತು.

| ಹಾಜರಿ | ಗೈರುಹಾಜರಿ |
|---|---|
| ಶ್ರೀ. ಗುರುಮೂರ್ತಿ ರೆಡ್ಡಿ (ಅಧ್ಯಕ್ಷರು) | ಶ್ರೀ. ವೇಣುಗೋಪಾಲ್ ರೆಡ್ಡಿ (ಸದಸ್ಯರು) |
| ಶ್ರೀ.ಗೋವಿಂದ ಸ್ವಾಮಿ(ಸದಸ್ಯರು) | ಶ್ರೀ. ಎಂ. ಶ್ರೀನಿವಾಸ ರೆಡ್ಡಿ. (ಸದಸ್ಯರು) |
| ಶ್ರೀಮತಿ. ಪದ್ಮಶ್ರೀ (ಸದಸ್ಯರು) | ಶ್ರೀಮತಿ. ಪಿಳ್ಳಮ್ಮ. (ಸದಸ್ಯರು) |
| ಶ್ರೀಮತಿ. ಡಾ॥ ಶಾಂತಿ (ಸದಸ್ಯರು) | ಶ್ರೀ. ಮುರಳಿ. (ಸದಸ್ಯರು) |
| ಶ್ರೀಮತಿ. ಚಿತ್ರ (ಸದಸ್ಯರು) | ಶ್ರೀಮತಿ. ತ್ರಿವೇಣಿ. (ಸದಸ್ಯರು) |
| ಶ್ರೀಮತಿ. ಲಕ್ಷ್ಮಿ (ಸ.ಕಂ.ಅ) | ಶ್ರೀ. ನಾಗರಾಜು. (ಸದಸ್ಯರು) |

- ಅಧ್ಯಕ್ಷರಾದ ಶ್ರೀ. ಗುರುಮೂರ್ತಿ ರೆಡ್ಡಿ ರವರು ಮಾತಾನಾಡಿ ಬೀದಿ ದೀಪಗಳು ದುರಾಸ್ತಿಯಲ್ಲಿದ್ದು, ಸದರಿ ಬೀದಿ ದೀಪಗಳ ನಿರ್ವಹಣೆಗಾಗಿ 50 ಬೀದಿ ದೀಪಗಳನ್ನು ಮಾತ್ರ ಹಾಕಲಾಗಿದೆ ಹೆಚ್.ಎಸ್.ಆರ್ ಬಡಾವಣೆಯ ಎಲ್ಲಾ ಸೆಕ್ಟರ್‌ಗಳಲ್ಲಿ ಬೀದಿಗಳನ್ನು ಒದಗಿಸಲು ಹಾಗೂ ಕೆಲವೆಡೆ 1 ಕಂಭಕ್ಕೆ ಅನಾವಶ್ಯಕವಾಗಿ 4 ದೀಪಗಳನ್ನು ಹಾಕಿರುವುದು ಅನವ್ಯಶಕ ಅದರಿಂದ ಅಗತ್ಯವಿರುವ ಕಡೆ ಬೀದಿ ದೀಪಗಳನ್ನು ಅಳವಡಿಸಲು ತಿಳಿಸಲಾಯಿತು.
- ಶ್ರೀ. ಗೋವಿಂದ ಸ್ವಾಮಿ ರವರು ಹೆಚ್.ಎಸ್.ಆರ್ 27ನೇ ಮೈನ್‌ನಲ್ಲಿ ಫುಟ್‌ಪಾತ್ Encrouchment ಸರಿ ಪಡಿಸಿದ್ದು ಉಳಿದಂತೆ 17ನೇ ಮೈನ್ ಮತ್ತು ಇತರೆ ರಸ್ತೆಗಳಲ್ಲಿ ಫುಟ್‌ಪಾತ್ Encrouchment (ಒತ್ತುವರಿಯನ್ನು ತೆರವುಗೊಳಿಸುವದಾಗಿ) ಅಧ್ಯಕ್ಷರಿಗೆ ತಿಳಿಸಿರುತ್ತಾರೆ.
- ಹೆಚ್.ಎಸ್.ಆರ್ ಬಡಾವಣೆಯ, ಸೆಕ್ಟರ್-1ರ ಕ್ಷೇಮಾಭಿವೃದ್ಧಿಯ ಸಂಘದವರು ರಸ್ತೆ ದುರಾಸ್ಥಿ, Pothole, ಮುಚ್ಚದೆ ಇರುವ ಬಗ್ಗೆ, ಬೀದಿ ದೀಪಗಳ ದುರಾಸ್ತಿ, ಬೀದಿ ನಾಯಿಗಳು ಮತ್ತು ಹಂದಿ ಹವಳಿ, ಕುಡಿಯುವ ನೀರಿನ ವ್ಯವಸ್ಥೆ, ಮತ್ತು ಉದ್ಯಾನವನಗಳ ದುರಾಸ್ಥಿ ಕುರಿತು ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ. ಗುರುಮೂರ್ತಿ ರೆಡ್ಡಿರವರಿಗೆ ಪತ್ರವನ್ನು ಸಲ್ಲಿಸಿರುತ್ತಾರೆ.
- ಶ್ರೀಮತಿ ಚಿತ್ರ ರವರು ಮಾತಾನಾಡಿ ಹೆಚ್.ಎಸ್.ಆರ್ 1ನೇ ಸೆಕ್ಟರ್‌ನಲ್ಲಿ ಗಣೇಶ ದೇವಾಸ್ಥಾನ ಉದ್ಯಾವನ ಮತ್ತು ಎಲ್ಲಾ ಉದ್ಯಾವನಗಳಲ್ಲಿ ಆಟದ ಸಾಮಗ್ರಿಗಳು ದುರಸ್ತಿಗೊಂಡಿದ್ದು ಸರಿಪಡಿಸಲು ತಿಳಿಸಿರುತ್ತಾರೆ.
- ಶ್ರೀಮತಿ ಪಧ್ಮಶ್ರೀ ರವರು ಎಲ್ಲಾ ದೂರುಗಳನ್ನು ಪತ್ರದ ಮೂಲಕ ಸ್ವೀಕರಿಸಿ ಸಂಬಂಧಿಸಿದ ಇಲಾಖೆಯವರು ದೂರುಗಳನ್ನು ಸೂಕ್ತ ಸಮಯದಲ್ಲಿ ವಿಲೇವಾರಿ ಮಾಡಲು ಸೂಚಿಸಿದರು.

- ಇಬ್ಬಲೂರು ಹತ್ತಿರ ರಸ್ತೆ ಅಪಘಾತದಲ್ಲಿ ಒಂದು ಸಾವಾಗಿದ್ದು ಸದರಿ ಅಫಘಾತದ ಸ್ಥಳದಲ್ಲಿ ರಸ್ತೆ ಉಬ್ಬುಗಳನ್ನು ಅಳವಡಿಸಲು ಕೋರಿರುತ್ತಾರೆ ಮತ್ತು ಸಣ್ಣ ರಸ್ತೆಗಳಲ್ಲಿ ಅಳವಡಿಸಿರುವ ಮತ್ತು ಹೆಚ್.ಎಸ್.ಆರ್ 8ನೇ ಕ್ರಾಸ್ ಮತ್ತು ಇತರೆ ರಸ್ತೆಗಳಲ್ಲಿ ರಸ್ತೆ ಉಬ್ಬುಗಳನ್ನು ತೆಗೆದು ಹಾಕಲು ಸೂಚಿಸಿರುತ್ತಾರೆ.
- ಹೆಚ್.ಎಸ್.ಆರ್ 24ನೇ ಮೈನ್‌ನಲ್ಲಿ ಏರ್‌ಟೆಲ್ ಕಾಂಪನಿಯವರು ರಸ್ತೆಗಳನ್ನು ಹಗೆದು, ರಸ್ತೆಗಳನ್ನು ಮುಚ್ಚದೆ ಇರುವುದು ಕಂಡು ಬಂದಿದ್ದು ಸದರಿ ರಸ್ತೆಗಳನ್ನು ಮುಚ್ಚಲು ಸಹಾಯಕ ಅಭಿಯಂತರರಿಗೆ ತಿಳಿಸಿ ಮತ್ತು ಸಹಾಯಕ ಅಭಿಯಂತರ ಮೇಲೆ ಸಾರ್ವಜನಿಕರು ಬಹಳ ದೂರುಗಳನ್ನು ಸಲ್ಲಿಸಿರುವುದು ಪ್ರಸ್ತಾಪಿಸಿದರು.
- ಹೆಚ್.ಎಸ್.ಆರ್ 4ನೇ ಸೆಕ್ಟರ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ Sewage water ನ್ನು Storm water drain ಗೆ ಬಿಡಲಾಗುತ್ತಿದ್ದು ಇದನ್ನು ಸರಿಪಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಪತ್ರ ಬರೆಯಲು ತಿಳಿಸಿರುತ್ತಾರೆ.
- 27ನೇ ಮೈನ್‌ನಲ್ಲಿ ಬೆಸ್‌ಮೆಂಟ್‌ನಲ್ಲಿರುವ ಅಂಗಡಿಗಳನ್ನು ತೆರವುಗೊಳಿಸಿದ್ದು ಸದರಿ ಅಂಗಡಿಗಳನ್ನು ತೆರವುಗೊಳಸಲು ನೋಟಿಸ್ ನೀಡಿದ ಕೇವಲ 3 ದಿನಗಳಲ್ಲಿ ತೆರವುಗೊಳಸಲಾಗಿದೆ ಇದು ಸರಿಯಿಲ್ಲ ಆದರೂ ಸಹ ಸದರಿ ಅಂಗಡಿಗಳನ್ನು ನಡೆಸಲು ಏಕೆ ಟ್ರೇಂಡ್‌ಲೆಸನ್ಸ್ ನೀಡಲಾಗಿದೆ ಒಂದು ವೇಳೆ ತೆರವುಗೊಳಸಬೇಕಾದಲ್ಲಿ ಒಂದು ವಾರ ಅಥವಾ ಒಂದು ತಿಂಗಳ ಕಾಲವಕಾಶವನ್ನು ನೀಡಬೇಕಾಗಿತ್ತು ಮಾನ್ಯ ಘನ ಉಚ್ಚನ್ಯಾಯಾಲಯದ ಆದೇಶವಿದ್ದರೂ ಸಹ ಏಕೆ ಬೆಸ್‌ಮೆಂಟ್‌ನಲ್ಲಿ ಅಂಗಡಿ ತೆರಿಯಲು ಅನುಮತಿ(ಟ್ರೇಂಡ್‌ಲೆಸನ್ಸ್) ನೀಡಲಾಗಿದೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮವಹಿಸಲು ತಿಳಿಸಲಾಯಿತು.
- ಹೆಚ್.ಎಸ್.ಆರ್ 27ನೇ ಮುಖ್ಯರಸ್ತೆ Moto nation ಅಂಗಡಿಯ ಮುಂದೆ ಫುಟ್‌ಪಾತ್/ರಸ್ತೆಗಳನ್ನು ಹಾಗೆದು ಹಾಗೆಯೇ ಬೀಡಲಾಗಿದೆ ಇದರಿಂದ ಸಾರ್ವಜನಿಕರ/ವಾಹನ ಸಂಚಾರಕ್ಕೆ ತೊಂದರೆ ಉಂಟಾಗಿದ್ದು ಇದನ್ನು ಸರಿಪಡಿಸಲು ದೂರನ್ನು ಸಹ ನೀಡಲಾಗಿದೆ ಎಂದು ತಿಳಿಸುತ್ತಾ ಸದರಿ ಸಮಯದಲ್ಲೇ (ದೂರಿನ ಸಂಖ್ಯೆ: 10823345) ನೀಡಿದರು.
- ಮೇಲ್ಕಂಡ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ. ಗುರುಮೂರ್ತಿ ರೆಡ್ಡಿ, ರವರು ಎಲ್ಲಾರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Lakshmi

ಕಾರ್ಯದರ್ಶಿಗಳು
ಸಂಚಾಲಕರು

ಅಧ್ಯಕ್ಷರು
ಹಾಲಿ ಪಾಲಿಕೆ ಸದಸ್ಯರು
ವಾರ್ಡ್ 174-ಹೆಚ್.ಎಸ್.ಆರ್ ಬಡಾವಣೆ

ದಿನಾಂಕ: 30.01.2019

**"ಸಭೆಯ ಆಹ್ವಾನ ಪತ್ರ"**

ದಿನಾಂಕ: 02.02.2019 ರಂದು ಶನಿವಾರ ಬೆಳ್ಳಿಗೆ 11.00 ಗಂಟೆಗೆ ಸರಿಯಾಗಿ ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ಕಛೇರಿ, ಪಾಲಿಕೆ ಸದಸ್ಯರ ಕೊಠಡಿಯಲ್ಲಿ ಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು, ಸಭೆಯ ಅಧ್ಯಕ್ಷತೆಯನ್ನು ವಾರ್ಡ್ ಕಮಿಟಿಯ ಅಧ್ಯಕ್ಷರಾದ ಶ್ರೀ.ಗುರುಮೂರ್ತಿ ರೆಡ್ಡಿ ರವರು ವಹಿಸಿರುತ್ತಾರೆ, ವಾರ್ಡ್ ನಂ: 174ಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು, ಸಾರ್ವಜನಿಕರಿಂದ ಬಂದಂತಹ ಮನವಿಗಳು, ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾಗಿರುವಂತೆ ಕೆಲಸ ಕಾರ್ಯಗಳು ಹಾಗೂ ಘನತ್ಯಾಜ್ಯ ನಿರ್ವಹಣೆ ಹಾಗೂ ಇತರೆ ವಿಷಯಗಳ ಬಗ್ಗೆ ಚರ್ಚಿಸಲು ಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು, ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರುಗಳಾದ ತಾವುಗಳು ತಪ್ಪದೇ ಈ ಸಭೆಗೆ ಹಾಜರಾಗಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ಕೋರುತ್ತೇನೆ.

ವಿಷಯ:

1. ಬೀದಿ ದೀಪಗಳ ನಿರ್ವಹಣೆ.
2. ಬೀದಿ ನಾಯಿ/ಹಂದಿಗಳ ಹಾವಳಿ.
3. ಬೀದಿ ಬದಿ ವ್ಯಾಪಾರಿಗಳ ಕುರಿತು
4. Footpath ತೆರವುಗೊಳಿಸುವ ಕುರಿತು
5. ಅಧ್ಯಕ್ಷರು ಅಪ್ಪಣೆ ಮೇರೆಗೆ ಇತರೆ ವಿಷಯಗಳು

**"Meeting Invitation"**

This is to keep you all informed that we have arranged to discuss the issues regarding development of roads and drain, Garbage and other subjects with the department officers and HSR Layout Ward Committee members which will be held on Dt: 02.02.2019, on Saturday morning by 11.00 am at HSR layout ward office. And the meeting will be held in the presence of ward committee President Sri.Gurumurthy Reddy. So we kindly request you all to attend this meeting without fail.

Subject:

1. Street Light Maintenance
2. Stray Dog/Pig Menace
3. Street Vendors Problems
4. Footpath Encroachment
5. Other Subjects with the permission of Committee President.

ಅಧ್ಯಕ್ಷರು/ಕಾರ್ಯದರ್ಶಿ
ವಾರ್ಡ್ ಕಮಿಟಿ, ವಾರ್ಡ್ ನಂ-174
ಬಿ.ಬಿ.ಎಂ.ಪಿ. ಬೆಂಗಳೂರು

ಗೆ/To:
ಕಂದಾಯ ಇಲಾಖೆ
ಹೆಚ್.ಎಸ್.ಆರ್ ಬಡಾವಣೆ
ಬೆಂಗಳೂರು-68